ಶ್ರೀರಾಮಕೃಷ್ಣರು ಶ್ರೀಮಾತೆಯವರಿಗೆ ಹೇಳಿದ್ದರು: ''ಇದು (ತಮ್ಮನ್ನು ತೋರಿಸುತ್ತ) ಇನ್ನೇನು ಮಾಡುವುದು? ನೀನು ಇನ್ನಷ್ಟು ಮಾಡಬೇಕಾಗಿದೆ.'' ಶ್ರೀಮಾತೆಯವರ ಜೀವನವನ್ನು ಕುರಿತು ಚಿಂತನೆ ನಡೆಸಿದಾಗ ನಮಗೆ ತಿಳಿದುಬರುವುದು, ನಿಜವಾಗಿಯೂ ಶ್ರೀರಾಮಕೃಷ್ಣರ ನಿರ್ಯಾಣದ ನಂತರ ಅವರು ಎಷ್ಟೊಂದು ಕೆಲಸ ಮಾಡಿದ್ದರು, ಎಷ್ಟೊಂದು ಮಂದಿ ಆರ್ತರ, ಅಸಹಾಯಕರ ಹಾಗೂ ದುಃಖಿತರಾದ ಜನರ ಬದುಕನ್ನು ಉದ್ಧಾರ ಮಾಡಿದ್ದರು! ನಾವು ಹೇಗೆ ಶ್ರೀಮಾತೆಯವರಿಂದ ೪೦-೪೫ ಪತ್ರಗಳನ್ನು ಪಡೆದೆವೋ, ಅದೇ ರೀತಿ ಅವರ ಅನೇಕ ಮಂದಿ ಶಿಷ್ಯಂದಿರು ಕೂಡ ಹಲವು ಪತ್ರಗಳನ್ನು ಪಡೆದಿದ್ದರು. ತಮ್ಮ ಮಕ್ಕಳ (ಶಿಷ್ಯಂದಿರ) ಮೇಲೆ ಶ್ರೀಮಾತೆಯವರಿಗೆ ಎಂಥ ವ್ಯಾಕುಲತೆ, ಮಮತೆ ಜ್ವಲಂತವಾಗಿ ವ್ಯಕ್ತವಾಗುತ್ತಿತ್ತು ಎಂಬುದನ್ನು ಅವರ ಪತ್ರಗಳಿಂದ ನಾವು ಕಂಡುಕೊಳ್ಳಬಹುದು. ಶ್ರೀಮಾತೆಯವರು ತಮ್ಮ ಕೊನೆಯ ದಿನಗಳಲ್ಲಿ ಬಾಗ್‌ಬಜಾರಿನಲ್ಲಿ ಅನಾರೋಗ್ಯದಿಂದಿದ್ದಾಗ, ನನ್ನ ಪತ್ನಿಯ ಪತ್ರಕ್ಕೆ ಹೀಗೆ ಉತ್ತರ ಬಂದಿತ್ತು: ''ಶ್ರೀಮಾತೆಯವರ ಪರಿಸ್ಥಿತಿ ಮೊದಲಿನಂತೆಯೇ ಇದೆ. ಯಾವುದೇ ಬದಲಾವಣೆ ಉಂಟಾಗಿಲ್ಲ. ದಿನದಲ್ಲಿ ಎರಡು ಬಾರಿ ಜ್ವರ ಬರುತ್ತಿದೆ. ಹೊಟ್ಟೆಯ ಹಾಗೂ ಕಾಲಿನ ಉರಿ ತುಸು ಕಡಿಮೆಯಾಗಿದೆ. ಈ ಬಾರಿ ಅಷ್ಟಮಿ, ಏಕಾದಶಿ ಕಳೆದಲ್ಲದೆ ಏನೂ ಗೊತ್ತಾಗದು.'' ಈ ಪತ್ರ ಬರೆದುದು ೧೯೨೦ರ ಜುಲೈ ೮ರಂದು. ಅದಾಗಿ ಹನ್ನೆರಡು ದಿನಗಳಲ್ಲಿ ಶ್ರೀಮಾತೆಯವರು ದೇಹತ್ಯಾಗ ಮಾಡಿದರು. ¤

---

# ಕರುಣೆಯ ಝರಿ ಶ್ರೀಮಾತೆ

ಮೂಲ ಬಂಗಾಳಿ : **ಸುರೇಶಚಂದ್ರ ಚೌಧುರಿ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

**ನಾ**ವು ಪೂರ್ವಬಂಗಾಳ (ಈಗಿನ ಬಾಂಗ್ಲಾದೇಶ)ದವರು. ಫರೀದ್‌ಪುರ್ ಜಿಲ್ಲೆಯ ಡಹರ್‌ಪಾಡಾ ಗ್ರಾಮದಲ್ಲಿ ನಮ್ಮ ಮನೆಯಿತ್ತು. ನನ್ನ ತಂದೆ ಗೋಪಾಲಗಂಜ್‌ನಲ್ಲಿ ಸರ್ಕಾರಿ ವಕೀಲರಾಗಿದ್ದರು. ಆದ ಕಾರಣ ನನ್ನ ಬಾಲ್ಯ ಹಾಗೂ ತಾರುಣ್ಯ ಗೋಪಾಲಗಂಜ್‌ನಲ್ಲೇ ಕಳೆಯಿತು. ನಾನು ಶಾಲೆಯಲ್ಲಿದ್ದಾಗಲೇ 'ಅನುಶೀಲನ ಸಮಿತಿ'ಯ ಸದಸ್ಯನಾಗಿದ್ದೆ; ಹಾಗೂ ಸ್ವದೇಶೀ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದೆ. ಕೆಲವು ದಿನಗಳ ನಂತರ ನನ್ನನ್ನು ರಾಷ್ಟ್ರದ್ರೋಹದ ಆರೋಪದ ಮೇಲೆ ಪೋಲೀಸರು ಬಂಧಿಸಿ ಕರೆದೊಯ್ದರು; ಒಂದೂವರೆ ವರ್ಷ ನಾನು ಕಾರಾಗೃಹದಲ್ಲಿ ಇರಬೇಕಾಯಿತು. ಜೈಲಿನಲ್ಲಿದ್ದಾಗ ಇನ್ನೊಬ್ಬ ಖೈದಿ, ತರುಣ ಡಾಕ್ಟರನೊಂದಿಗೆ ನನ್ನ ಸ್ನೇಹ ಬೆಳೆಯಿತು. ಅವನೂ ಸ್ವದೇಶೀ ಆಂದೋಲನದಲ್ಲಿ ತೊಡಗಿದ್ದವನು. ಆ ಡಾಕ್ಟರ್ ಸ್ನೇಹಿತನಿಂದ ನಾನು ಯಾವಾಗಲೂ ಶ್ರೀರಾಮಕೃಷ್ಣರ ಹಾಗೂ ಸ್ವಾಮಿ ವಿವೇಕಾನಂದರ ವಿಷಯವಾಗಿ ಕೇಳಿ ತಿಳಿಯುತ್ತಿದ್ದೆ. 'ಅನುಶೀಲನ ಸಮಿತಿ'ಗೆ ಸೇರಿದ್ದರಿಂದ, ಹಾಗೂ ಸ್ವದೇಶೀ ಚಳವಳಿಯಲ್ಲಿ ಇದ್ದುದರಿಂದ ನನಗೆ ಮೊದಲೇ ಶ್ರೀರಾಮಕೃಷ್ಣರ ಹಾಗೂ ಸ್ವಾಮಿ ವಿವೇಕಾನಂದರ ಬಗ್ಗೆ ಆಸಕ್ತಿಯಿತ್ತು; ಆದರೆ ಡಾಕ್ಟರನ ಒಡನಾಟದಿಂದಾಗಿ ಈ ಆಕರ್ಷಣೆ ಇನ್ನಷ್ಟು ಅಧಿಕವಾಯಿತು. ಶ್ರೀರಾಮಕೃಷ್ಣರ ಸಹಧರ್ಮಿಣಿ ಶ್ರೀಮಾತೆ ಶಾರದಾದೇವಿಯವರು ಇನ್ನೂ ಬದುಕಿದ್ದಾರೆ, ಹಾಗೂ ನಡುನಡುವೆ ಕಲ್ಕತ್ತದಲ್ಲಿದ್ದ ತಮ್ಮ ನಿವಾಸಕ್ಕೆ ಆಗಾಗ ಬಂದು, ಅಲ್ಲಿ ತಂಗುತ್ತಾರೆ ಎಂದು ಆ ಸ್ನೇಹಿತನಿಂದಲೇ ನಾನು ಮೊದಲ ಬಾರಿಗೆ ಕೇಳಿದ್ದೆ. ಈ ವಿಷಯವನ್ನು ತಿಳಿದಂದಿನಿಂದ ನನಗೆ ಒಂದೇ ಚಿಂತೆ – ಹೇಗೆ ಮತ್ತು ಯಾವಾಗ ಶ್ರೀಮಾತೆಯವರ ದರ್ಶನ ಮಾಡಲಿ – ಎಂಬುದಾಗಿ. ಜೈಲಿನಲ್ಲಿ ಸಾಮಾನ್ಯವಾಗಿ ಸಿಗುತ್ತಿದ್ದ ಮಾಸಿಕ ಭತ್ಯೆಯನ್ನು ಸ್ವಲ್ಪ ಸ್ವಲ್ಪವೇ ನಾನು ಕೂಡಿಡುತ್ತಿದ್ದೆ ; ಬಿಡುಗಡೆ ಆದ ಕೂಡಲೇ ಶ್ರೀಮಾತೆಯವರ ದರ್ಶನ ಮಾಡಲು ಹೋಗಲು ದಾರಿ ಖರ್ಚಿಗಾಗಿ.

೧೯೧೯ರ ಮೇ ತಿಂಗಳಲ್ಲಿ ಒಂದು ಶುಭ ಮುಂಜಾನೆಯ ವೇಳೆಗೆ ಖುಲ್ನಾ ಜಿಲ್ಲೆಯ ದೌಲತ್‌ಪುರದಲ್ಲಿದ್ದ ಕಾರಾಗೃಹದಿಂದ ನನಗೆ ಬಿಡುಗಡೆಯಾಯಿತು. ಬಿಡುಗಡೆ ಆದ ಕೂಡಲೇ ಉಟ್ಟ ಬಟ್ಟೆಯಲ್ಲೇ ನಾನು ಅತ್ಯಂತ ವ್ಯಾಕುಲತೆಯಿಂದ ಹೊರಬಂದು, ಶ್ರೀಮಾತೆಯವರ ದರ್ಶನ ಪಡೆಯಲು ಹೊರಟೆ. ನಾನು ಹೋಗಬೇಕಾಗಿದ್ದುದು ಬಾಗ್‌ಬಜಾರಿನಲ್ಲಿದ್ದ 'ಉದ್ಬೋಧನ' ಕಾರ್ಯಾಲಯಕ್ಕೆ, ಅಥವಾ ಶ್ರೀಮಾತೆಯವರ ಮನೆಗೆ. ಕೊನೆಗೂ ಅಲ್ಲಿಗೆ ತಲುಪಿದೆ; ಆದರೆ ಆಗ ಅಲ್ಲಿ ಶ್ರೀಮಾತೆಯವರು ಇರಲಿಲ್ಲ. ಅವರು ಎಲ್ಲಿದ್ದಾರೆ ಎಂದು ಯಾರನ್ನೊ ಕೇಳಿದೆ, ನಾನು ನೇರವಾಗಿ ಶ್ಯಾಮ್‌ಬಜಾರಿನಲ್ಲಿದ್ದ ಗೌರಿ-ಮಾ ಅವರ 'ಶ್ರೀಶಾರದೇಶ್ವರಿ ಆಶ್ರಮ'ಕ್ಕೆ ಹೋದೆ. ನಾನು ಆಗಿನ್ನೂ ಹುಡುಗ; ಶ್ರೀಮಾತೆಯವರ ಹೆಸರಿನಲ್ಲಿರುವ ಆಶ್ರಮವಾದ್ದರಿಂದ ಅಲ್ಲೇ ಶ್ರೀಮಾತೆಯವರು ಇರಲೇ ಬೇಕಲ್ಲ ಎಂದು ಭಾವಿಸಿದ್ದೆ. ಶ್ರೀಮಾತೆಯವರು ಅಲ್ಲಿ ಇರಲಿಲ್ಲವೆಂದು ಮತ್ತೆ ಹೇಳುವ ಅಗತ್ಯವಿಲ್ಲ. ಆದರೆ ಅಲ್ಲಿ ಗೌರಿ-ಮಾ ಅವರ ಭೇಟಿ ಮಾಡಿದೆ. ಅವರು ನನ್ನೊಂದಿಗೆ ಬಹಳ ಹೊತ್ತು ಮಾತನಾಡಿದರು. ನನ್ನ ಕಥೆಯನ್ನೆಲ್ಲ ಕೇಳಿದ ಗೌರಿ-ಮಾ ಅವರು, ನನ್ನ ಕ್ರಾಂತಿಕಾರಿ ಮಾರ್ಗವನ್ನು ತ್ಯಜಿಸಲು ಹೇಳಿದರು. ಅವರಿಗೆ ಪ್ರಣಾಮ ಮಾಡಿ ಮತ್ತೆ ನಾನು ಹೊರಟೆ. ಆದರೆ ನಾನು ಯಾವ ಶ್ರೀಮಾತೆಯವರ ದರ್ಶನ ಪಡೆಯಲು ಬಂದಿದ್ದೆನೋ, ಅವರ ಬಗ್ಗೆ ಅಲ್ಲಿ ಯಾರ

ನ್ನಾಗಲಿ, ಗೌರಿ–ಮಾ ಅವರನ್ನಾಗಲೀ ಕೇಳಿರಲಿಲ್ಲ. ಶ್ರೀಮಾತೆಯವರು ಖಂಡಿತವಾಗಿಯೂ ಕಾಮಾರಪುಕುರದಲ್ಲಿ ಇದ್ದೇ ಇರುತ್ತಾರೆ ಎಂದೇ ನಾನು ಭಾವಿಸಿದ್ದೆ. ಈಗ ನನ್ನ ಗುರಿ ಕಾಮಾರಪುಕುರ ಒಂದೇ. ನನ್ನಲ್ಲಿದ್ದುದು ಮಾಸಿಕ ಭತ್ಯೆಯ ಕೆಲವೇ ರೂಪಾಯಿಗಳು ಮಾತ್ರ. ಅದರಲ್ಲಿ ಒಂದಿಷ್ಟು ಈಗಾಗಲೇ ಖರ್ಚಾಗಿಬಿಟ್ಟಿದೆ. ಆಗ ಕಲ್ಕತ್ತೆಯಿಂದ ಬಹಳ ಕಷ್ಟಪಟ್ಟುಕೊಂಡು ಕಾಮಾರಪುಕುರಕ್ಕೆ ಹೋಗಬೇಕಿತ್ತು. ರೈಲಿನಲ್ಲಿ ತುಸು, ಕಾಲುನಡಿಗೆ ಮೂಲಕ ತುಸು ಪ್ರಯಾಣಿಸಬೇಕಿತ್ತು. ನಾನು ನಡಿಗೆಯ ಮೂಲಕವೇ ಇಡೀ ದಾರಿ ಪ್ರಯಾಣಿಸಿದೆ.

ಅದು ಜ್ಯೇಷ್ಠ ಮಾಸ. ನನ್ನ ಆರಾಧ್ಯಮೂರ್ತಿಯಾದ ಶ್ರೀಮಾತೆಯವರ ದರ್ಶನಕ್ಕಾಗಿ ನಾನು ಪ್ರಖರವಾದ ಬಿಸಿಲಿನಲ್ಲಿ ಕಲ್ಕತ್ತೆಯಿಂದ ನಡೆಯುತ್ತಾ ಹೊರಟಿದ್ದೆ. ಹಸಿವೆಯಾದಾಗ ಒಂದೆರಡು ಪೈಸೆಗೆ ಕಡಲೆಪುರಿ ಕೊಂಡುಕೊಂಡು ತಿನ್ನುತ್ತಿದ್ದೆ; ರಸ್ತೆ ಬದಿಯಲ್ಲಿದ್ದ ಯಾವುದೋ ಕೆರೆಯ ನೀರು ಕುಡಿಯುತ್ತಿದ್ದೆ. ಬೇಸಿಗೆಯ ಧಗೆಯಿಂದ ಮೈಯೆಲ್ಲ ಸುಟ್ಟು ಹೋಗಿತ್ತು. ರಸ್ತೆಯ ಪಕ್ಕದಲ್ಲಿದ್ದ ಕೆರೆಯಲ್ಲಿ ಮುಳುಗಿ ದೇಹವನ್ನು ತಂಪುಮಾಡಿಕೊಳ್ಳುತ್ತಿದ್ದೆ. ಒದ್ದೆಯಾದ ಅಂಗಿ, ಬಟ್ಟೆಬರೆ ಎಲ್ಲವೂ ಹಾಗೆಯೇ ಒಣಗಿಬಿಡುತ್ತಿತ್ತು. ಮೂರು ದಿನಗಳ ನಂತರ ಮಧ್ಯಾಹ್ನದ ಹೊತ್ತಿಗೆ ಕಾಮಾರಪುಕುರವನ್ನು ತಲುಪಿದೆ. ಶ್ರೀರಾಮಕೃಷ್ಣರು ಮನೆಯನ್ನು ಹುಡುಕುತ್ತಾ ಅಲ್ಲಿಗೆ ಹೋಗಿ ತಲುಪಿದಾಗ ಶಿವು–ಅಣ್ಣನ ಭೇಟಿಯಾಯಿತು. ಅವರೆಂದರು, ''ಶ್ರೀಮಾತೆಯವರು ಇಲ್ಲಿಲ್ಲ. ಅವರು ಕೋಯಲ್‌ಪಾರಾದಲ್ಲಿದ್ದಾರೆ.'' ಹಾಲದಾರ ಪುಕುರ ಕೆರೆಯಲ್ಲಿ ಸ್ನಾನ ಮಾಡಿ, ಶಿವು ಅಣ್ಣನ ಬಳಿ ಅನ್ನ, ಡಾಲ್ ಇತ್ಯಾದಿ ಊಟ ಮಾಡಿ, ಕೋಯಲ್‌ಪಾರಾಗೆ ಹೋಗಲು ಹೊರಟು ನಿಂತೆ. ಹೊರಡುವಾಗ ಶಿವು–ಅಣ್ಣನಿಗೆ ಪ್ರಣಾಮ ಮಾಡಿದೆ. ಅವರೆಂದರು: ''ಠಾಕೂರರು ತಮ್ಮ ಕೈಯಿಂದಲೇ ನೆಟ್ಟು ಬೆಳೆಸಿದ ಮರದ ಮಾವಿನಹಣ್ಣನ್ನು ಶ್ರೀಮಾತೆಯವರಿಗೆ ಕೊಡು.'' ಮಾವಿನ ಹಣ್ಣಿನ ಚೀಲವನ್ನು ತೆಗೆದುಕೊಂಡು ಕೋಯಲ್‌ಪಾರಾಗೆ ಹೋಗುವ ರಸ್ತೆಗೆ ಇಳಿದೆ. ನಾನು ಕೋಯಲ್‌ಪಾರಾ ತಲುಪುವಾಗ ಸುಮಾರಾಗಿ ಸಂಜೆಯಾಗಿತ್ತು. ಆಶ್ರಮದ ಕಟ್ಟಡದ ಮುಂದೆ ಹೋಗಿ ನಿಂತಾಗ, ನನ್ನ ಒಣಗಿ ಹೋದ ಮುಖ ಹಾಗೂ ಮಲಿನಗೊಂಡ ಬಟ್ಟೆಬರೆ ಇವನ್ನೆಲ್ಲ ಕಂಡು ಅಲ್ಲಿದ್ದ ಕೆಲವರು ಅವಾಕ್ಕಾದಂತೆ ನನಗನ್ನಿಸಿತು. ಬಳಿಕ ನಾನು ಈಗತಾನೇ ಜೈಲಿನಿಂದ ಬಿಡುಗಡೆಯಾದ ವ್ಯಕ್ತಿ ಎಂದು ತಿಳಿದ ಕೂಡಲೇ ಅವರ ಮುಖದಲ್ಲಿ ಆತಂಕದ ಛಾಯೆ ಕಾಣಿಸಿಕೊಂಡಿತು. ಅವರೆಂದರು: ''ಸಾಮಾನ್ಯವಾಗಿ ಪ್ರತಿದಿನವೂ ಇಲ್ಲಿಗೆ ಪೋಲೀಸರು ಬಂದು ಸುದ್ದಿ ಸಮಾಚಾರ ವಿಚಾರಿಸಿಕೊಂಡು ಹೋಗುತ್ತಾರೆ. ಹೊಸದಾಗಿ ಯಾರನ್ನೇ ನೋಡಿದರೂ ಏನೇನೋ ಪ್ರಶ್ನೆ ಮಾಡಿ ವಿಚಾರಿಸುತ್ತಾರೆ. ನಿನ್ನನ್ನು ನೋಡಿದ ಮೇಲಂತೂ ಕೇಳುವುದೇಬೇಡ. ನಿನ್ನನ್ನು ಬಂಧಿಸಿ ಕರೆದೊಯ್ಯುತ್ತಾರೆ. ಇದರೊಂದಿಗೆ ಶ್ರೀಮಾತೆಯವರಿಗೂ ಈ ಅನವಶ್ಯಕ ತೊಂದರೆಗಾಗಿ ಬಯ್ದುಬಿಡುತ್ತಾರೆ. ನೀನು ಈಗಲೇ ಇಲ್ಲಿಂದ ಹೊರಟುಹೋಗಿಬಿಡು.'' ಈ ರೀತಿ ಅವರು ಹೇಳುತ್ತಿದ್ದಾಗ ಒಬ್ಬ ಚಿಕ್ಕ ಹುಡುಗ ಬಂದು ಹೇಳಿದ: ''ಕಲ್ಕತ್ತಾದಿಂದ ಈಗ ತಾನೇ ಬಂದ ಹುಡುಗನನ್ನು ಶ್ರೀಮಾತೆ ಒಳಕ್ಕೆ ಕರೆಯುತ್ತಿದ್ದಾರೆ.'' ಈ ಒಂದೇ ಮಾತಿನಿಂದ ನನ್ನ ಮನಸ್ಸು, ಪ್ರಾಣ ಎಲ್ಲವೂ ಕರುಣೆಯ ಜಲಪ್ರವಾಹದಲ್ಲಿ ಸ್ನಾನಮಾಡಿ ಮೇಲೆದ್ದಂತಾಯಿತು. ನನ್ನ ಎರಡೂ ಕಣ್ಣುಗಳಿಂದ ನೀರಿಳಿಯತೊಡಗಿತು– ಅದೇ ಶ್ರೀಮಾತೆಯವರಿಗೆ ಸಲ್ಲಿಸಿದ ಪಾದ್ಯ, ಅರ್ಘ್ಯ ಆಗಿರುವಂತೆ ಅನ್ನಿಸಿತು.

ಆ ನಿವಾಸದ ಒಳಕ್ಕೆ ಹೋಗಿ ನೋಡಿದೆ– ಶ್ರೀಮಾತೆಯವರು ವರಾಂಡದಲ್ಲಿ ಕುಳಿತಿದ್ದರು. ಎಷ್ಟೋ ದಿನಗಳಿಂದ ಪರಿಚಯವಿದ್ದಂತೆ, ಮಧುರವಾದ ಧ್ವನಿಯಿಂದ ಹೇಳಿದರು, ''ಬಾ ಮಗೂ, ಕೈಕಾಲು ಮುಖ ತೊಳೆದುಕೊಂಡು ಬಾ. ಅನಂತರ ಏನಾದರೂ ಒಂದಿಷ್ಟು ತಿನ್ನು.'' ಶಿವು–ಅಣ್ಣ ಕೊಟ್ಟಿದ್ದ ಮಾವಿನ ಹಣ್ಣಿನ ಚೀಲವನ್ನು ಶ್ರೀಮಾತೆಯವರ ಪಾದಗಳ ಬಳಿ ಇಟ್ಟು ಹೇಳಿದೆ: ''ಈ ಮಾವಿನ ಹಣ್ಣುಗಳನ್ನು ಶಿವು–ಅಣ್ಣ ನಿಮಗೋಸ್ಕರ ಕಳುಹಿಸಿಕೊಟ್ಟಿದ್ದಾರೆ.'' ಶಿವು–ಅಣ್ಣನ ಮನೆಯಲ್ಲಿ ಮಧ್ಯಾಹ್ನ ಊಟ ಮಾಡಿ ಬಂದಿದ್ದೆ ಎಂದಾಗ ಅವರೆಂದರು, ''ಅದಿರಲಿ. ಈಗ ಒಂದಿಷ್ಟು ಏನಾದರೂ ತಿನ್ನು.'' ಕೈಕಾಲು ಮುಖ ತೊಳೆದು ಬಂದೆ. ಶ್ರೀಮಾತೆಯವರು ತಮ್ಮ ಪಕ್ಕದಲ್ಲಿ ಹಾಕಿದ್ದ ಆಸನದಲ್ಲಿ ಕುಳಿತುಕೊಳ್ಳಲು ನನಗೆ ಹೇಳಿದರು. ನನಗೆ ತಿನ್ನಲು ಏನಾದರೂ ಕೊಡಲು (ಯಾರಿಗೋ) ಹೇಳಿದರು. ತಿನ್ನುವ ಪದಾರ್ಥಗಳು ಸಾಮಾನ್ಯವೆ ಒಂದು ತಟ್ಟೆಯಲ್ಲಿ ಕಡಲೆಪುರಿ, ಇನ್ನೊಂದು ಸಣ್ಣ ತಟ್ಟೆಯಲ್ಲಿ ನಾಲ್ಕೈದು ಕೊಬ್ಬರಿ ಲಾಡುಗಳು ಇದ್ದವು. ಶ್ರೀಮಾತೆಯವರು ಹೇಳಿದರು, ''ಶಿವುನ ಮನೆಯಲ್ಲಿ ಅನ್ನ ಊಟಮಾಡಿದ್ದೀಯಾ. ಈಗ ಇದನ್ನು ತಿನ್ನು ಮಗೂ. ರಾತ್ರಿ ಚೆನ್ನಾಗಿ ಊಟ ಮಾಡಿಸುತ್ತೇನೆ.'' ಆಗ ಅಲ್ಲಿದ್ದ ಆಹಾರ ಸಾಮಾನ್ಯವೆ; ಆದರೆ ಅದರ ರುಚಿ ಅಸಾಧಾರಣವಾಗಿತ್ತು. ಅದನ್ನು ತಿಂದ ನಂತರ ಶ್ರೀಮಾತೆಯವರು ಹೇಳಿದರು, ''ರಾತ್ರಿ ಹೊತ್ತು ಇಲ್ಲೇ ಕಳೆ, ಕಷ್ಟವಾದರೂ ಸರಿ. ನಾಳೆ ಬೆಳಿಗ್ಗೆ ಸ್ನಾನ ಮಾಡಿ ತಯಾರಾಗು. ನಾನು ಕರೆಯುತ್ತೇನೆ. ಈಗ ನೀನು ಹೋಗಿ ವಿಶ್ರಾಂತಿ ಮಾಡಿಕೋ. ವರದ ನಿನಗೆ ವಾಸ ಮಾಡುವ ಜಾಗ ತೋರಿಸುತ್ತಾನೆ.'' ಶ್ರೀಮಾತೆಯವರ ಮಾತಿಗೆ ಅನುಸಾರವಾಗಿ ಒಬ್ಬ ಹುಡುಗ ಬಂದು, ಸಮೀಪದಲ್ಲಿದ್ದ ಚಂಡೀ ಮಂಟಪದಲ್ಲಿ ರಾತ್ರಿಹೊತ್ತು ನಿದ್ದೆ ಮಾಡುವ ಜಾಗ ತೋರಿಸಲು ಕರೆದುಕೊಂಡು ಹೋದ. ಆ ಹುಡುಗನ ಹೆಸರು ವರದ ಎಂದು– ಮುಂದೆ ಆತನ ಹೆಸರು ಸ್ವಾಮಿ ಈಶಾನಾನಂದ ಎಂದಾಯಿತು.

ಮರುದಿನ ಬೆಳಿಗ್ಗೆ ಸ್ನಾನ ಇತ್ಯಾದಿಗಳನ್ನು ಮುಗಿಸಿ, ತಯಾರಾಗಿ ನಿಂತೆ. ಮರುದಿನ ಆರುಗಂಟೆಯ ಹೊತ್ತಿಗೆ ವರದ

ಬಂದು ನನ್ನನ್ನು ಕರೆದ. ''ಶ್ರೀಮಾತೆ ಕರೆಯುತ್ತಿದ್ದಾರೆ'' ಎಂದ. ಅಲ್ಲಿಗೆ ಹೋಗುವಷ್ಟರಲ್ಲೇ ಶ್ರೀಮಾತೆಯವರನ್ನು ಭೇಟಿಯಾದೆ. ನಾನು ಪ್ರಣಾಮ ಮಾಡುತ್ತಲೇ ಅವರು ಸನ್ನೆ ಮಾಡಿ, ರಸ್ತೆಯಲ್ಲೇ ಹಿಡಿ ಹುಲ್ಲಿನಿಂದ ಆಸನವನ್ನಾಗಿ ಮಾಡಿ, ಅದನ್ನು ಹರಡಿ ಅದರ ಮೇಲೆ ಕುಳಿತುಕೊಳ್ಳಲು ಹೇಳಿದರು. ನಾನು ಕುಳಿತೆ. ಶ್ರೀಮಾತೆಯವರು ಇನ್ನೊಂದು ಹುಲ್ಲಿನ ಆಸನದ ಮೇಲೆ ಕುಳಿತರು. ಅವರು ಹೇಳಿದರು, ''ಮಗೂ, ಠಾಕೂರರಿಗೆ ಮನಸ್ಸಿನಲ್ಲೇ ಪ್ರಣಾಮ ಮಾಡು.'' ಶ್ರೀಮಾತೆಯವರು ಶ್ರೀರಾಮಕೃಷ್ಣರ ಬಗ್ಗೆ ಠಾಕೂರ್ ಎಂದು ತಿಳಿಸಿಕೊಟ್ಟುದನ್ನು ನನಗೆ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಇದರಿಂದಾಗಿ, ಯಾರಿಗೆ ಪ್ರಣಾಮ ಮಾಡಬೇಕೆಂದು ನನಗೆ ತಿಳಿಯಲಿಲ್ಲ. ಅದಕ್ಕಾಗಿ ನಾನು ಶ್ರೀಮಾತೆಯವರಿಗೇ ಪ್ರಣಾಮ ಮಾಡಿದೆ, ಅವರೇ ನನ್ನ ಠಾಕೂರ್[೧] ಎಂಬ ಭಾವನೆಯಿಂದ. ನಾನು ಬಾಯಿಬಿಟ್ಟು ಏನನ್ನೂ ಹೇಳದಿದ್ದರೂ, ಶ್ರೀಮಾತೆಯವರ ಮುಖದಲ್ಲಿ ಮಧುರವಾದ ನಗೆಯನ್ನು ಕಂಡೆ. ಅನಂತರ ಶ್ರೀಮಾತೆಯವರು ನನ್ನ ಮೇಲೆ ಕೃಪೆ ತೋರಿ ಮಹಾಮಂತ್ರವನ್ನು ಉಪದೇಶಿಸಿದರು. ಹೇಗೆ ಕರಜಪವನ್ನು ಮಾಡಬೇಕು ಎಂಬುದನ್ನು ತೋರಿಸಿಕೊಟ್ಟು, ಅವರ ಮುಂದೆ ಜಪ ಮಾಡಲು ನನಗೆ ಹೇಳಿದರು. ಅನಂತರ ಹೇಳಿದರು, ''ಈಗ ಇಲ್ಲೇ ಕುಳಿತು ಒಂದಿಷ್ಟು ಜಪ ಮಾಡು.'' ಸ್ವಲ್ಪ ಸಮಯದ ನಂತರ ಹೇಳಿದರು, ''ನೋಡು ಮಗೂ, ನೀನು ಈಗಲೇ ಇಲ್ಲಿಂದ ಜಯರಾಮಬಾಟಿಗೆ ಹೋಗಿಬಿಡು. ಇಲ್ಲಿ ಪೋಲೀಸರ ಗದ್ದಲ ಜಾಸ್ತಿ. ಅವರು ಪ್ರತಿದಿನವೂ ಇಲ್ಲಿಗೆ ಬಂದು, ಸುದ್ದಿ ಸಮಾಚಾರ ತಿಳಿದುಕೊಂಡು ಹೋಗುತ್ತಾರೆ. ಯಾರಾದರೂ ಹೊಸ ಹುಡುಗರು ಬಂದರೆ, ಅವರನ್ನು ವಿಚಾರಿಸುತ್ತಾರೆ; ಹಾಗೂ ಕೆಲವೊಮ್ಮೆ ಪೋಲಿಸ್ ಠಾಣೆಗೆ ಕರೆದುಕೊಂಡು ಹೋಗುತ್ತಾರೆ. ನಿನ್ನನ್ನು ನೋಡಿದರೆ, ಅವರು ನಿನ್ನನ್ನು ಪೋಲಿಸ್ ಠಾಣೆಗೆ ಕರೆದೊಯ್ಯಬಹುದು.''

ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ಆಶ್ರಮಕ್ಕೆ ಬಂದೆ. ವರಾಂಡದಲ್ಲಿ ನನಗೋಸ್ಕರ ಆಸನ ಹರಡಿದ್ದನ್ನು ಕಂಡೆ. ಆಸನದಲ್ಲಿ ಕುಳಿತೆ. ಒಬ್ಬಾಕೆ ಮಹಿಳೆ ನನಗೆ ಊಟ ಬಡಿಸಿದಳು. ತಿನ್ನಲು ಆರಂಭಿಸುವ ಮೊದಲೇ ಶ್ರೀಮಾತೆ ಅಲ್ಲಿಗೆ ಬಂದರು. ಅಲ್ಲಿಗೆ ಬಂದ ಅವರು ಒಂದು ತುಣುಕು ಕಲ್ಲುಸಕ್ಕರೆಯನ್ನು ತಮ್ಮ ನಾಲಗೆಗೆ ಸ್ಪರ್ಶಿಸಿ, ಅದನ್ನು ಪ್ರಸಾದ ಮಾಡಿ, ಬಳಿಕ ನನ್ನ ಕೈಗಿತ್ತರು. ನಾನು ಊಟ ಮಾಡುವ ಸಮಯದಲ್ಲಿ ಶ್ರೀಮಾತೆ ಪಕ್ಕದಲ್ಲೇ ಕುಳಿತಿದ್ದರು. ನನ್ನ ಊಟ ಮುಗಿದ ನಂತರ, ಶ್ರೀಮಾತೆಯವರಿಗೆ ಮತ್ತೊಮ್ಮೆ ಪ್ರಣಾಮ ಮಾಡಿ ಅಲ್ಲಿಂದ ಹೊರಟೆ. ಶ್ರೀಮಾತೆಯವರು ನನ್ನ ತಲೆಯ ಮೇಲೆ ಕೈಯಿಟ್ಟು ಆಶೀರ್ವಾದ ಮಾಡಿದರು, ಹಾಗೂ ಗಲ್ಲವನ್ನು ಸ್ಪರ್ಶ ಮಾಡುವ ಮೂಲಕ ಚುಂಬಿಸಿದರು. ರಸ್ತೆಗಿಳಿದಾಗ ಹಿಂದಿರುಗಿ ನೋಡಿದೆ, ಶ್ರೀಮಾತೆಯವರು ಬಾಗಿಲ ಮುಂದೆ ನಿಂತು ನೋಡುತ್ತಲೇ ಇದ್ದರು. ಅವರ ಕಣ್ಣುಗಳಲ್ಲಿ ನೀರಿಳಿಯುತ್ತಿತ್ತು. ಎಲ್ಲಿಯ ತನಕ ನಾನು ಕಾಣಿಸುತ್ತಿದ್ದೆನೋ, ಅಲ್ಲಿಯವರೆಗೂ ಅವರು ನೋಡುತ್ತಲೇ ನಿಂತಿದ್ದರು.

ನಾನು ಆನಂದದಿಂದ ತುಂಬಿ ರಸ್ತೆಯಲ್ಲಿ ನಡೆಯುತ್ತಿದ್ದೆ. ಜಯರಾಮಬಾಟಿ, ಕಾಮಾರಪುಕುರಗಳನ್ನು ದರ್ಶನ ಮಾಡಿ, ನೇರ ಬೇಲೂರು ಮಠಕ್ಕೆ ಹೋಗುವೆನೆಂದು ನಿರ್ಧರಿಸಿದೆ. ಬೇಲೂರು ಮಠಕ್ಕೆ ಹೋಗಿ ತಲುಪಿದೆ. ಅಲ್ಲಿ ಆಗ ಸ್ವಾಮಿ ಬ್ರಹ್ಮಾನಂದ ಮಹಾರಾಜರು ಇರಲಿಲ್ಲ. ಅಲ್ಲಿನ ಸಾಧುಗಳು ನನ್ನನ್ನು ಮಹಾಪುರುಷ ಮಹಾರಾಜರ ಬಳಿಗೆ ಕರೆದುಕೊಂಡು ಹೋದರು. ಮಹಾಪುರುಷ ಮಹಾರಾಜರಿಗೆ ನಾನು ನನ್ನ ಎಲ್ಲ ಕಥೆಯನ್ನು ಹೇಳಿದೆ. ನಾನು ಶ್ರೀಮಾತೆಯವರಿಂದ ದೀಕ್ಷೆ ಪಡೆದದ್ದನ್ನು ಕೇಳಿ, ಹಾಗೂ ನಾನು ಬೇಲೂರು ಮಠದಲ್ಲಿ ಬ್ರಹ್ಮಚಾರಿಯಾಗಿ ಇರಬಯಸಿದ್ದೇನೆ ಎಂಬುದನ್ನು ಕೇಳಿ ಅವರು ಅಲ್ಲೇ ಉಳಿದುಕೊಳ್ಳಲು ಅನುಮತಿ ನೀಡಿದರು. ಕೆಲವು ದಿನಗಳ ಮಟ್ಟಿಗೆ ನಾನು ಅಲ್ಲಿ ಬ್ರಹ್ಮಚಾರಿ ಎಂಬಂತೆ ಉಳಿದುಕೊಂಡಿದ್ದೆ. ಆದರೆ ದೌರ್ಭಾಗ್ಯವಶಾತ್ ನಾನು ತುಂಬಾ ಕಾಯಿಲೆಗೆ ಒಳಗಾದೆ. ಆಗ ಬೇಲೂರು ಮಠದಲ್ಲಿ ಚಿಕಿತ್ಸೆಗೆ ವ್ಯವಸ್ಥೆಯೇನೂ ಇರಲಿಲ್ಲ. ಮಹಾಪುರುಷ್ ಮಹಾರಾಜರು ನನಗೆ ಹೇಳಿದರು, ''ಈಗ ನೀನು ಮನೆಗೆ ಹೋಗಿ, ಚೆನ್ನಾಗಿ ಊಟ ತಿಂಡಿ ಮಾಡಿ, ಚೆನ್ನಾಗಿ ಕಾಯಿಲೆ ವಾಸಿ ಮಾಡಿಕೋ. ಇಲ್ಲಂತೂ ಚೆನ್ನಾಗಿ ಊಟ ಇತ್ಯಾದಿಗಳಾಗಲೀ, ಚಿಕಿತ್ಸೆಯಾಗಲೀ ಸಿಗಲು ವ್ಯವಸ್ಥೆಯಿಲ್ಲ.'' ನಾನು ಮನೆಗೆ ಮರಳಿ ನಿಧಾನವಾಗಿ ಕಾಯಿಲೆಯಿಂದ ಗುಣಮುಖನಾದೆ. ಆದರೆ ಮನೆಯಲ್ಲಿನ ಒತ್ತಡದಿಂದ – ವಿಶೇಷವಾಗಿ ತಂದೆಯವರ ಒತ್ತಡದಿಂದಾಗಿ ನನಗೆ ಅಲ್ಲಿಂದ ಬಿಟ್ಟುಬರಲಾಗಲಿಲ್ಲ. ಪರಿಸ್ಥಿತಿಯನ್ನು ವಿವರಿಸಿ ನಾನು ಮಹಾಪುರುಷ್ ಮಹಾರಾಜರಿಗೆ ಪತ್ರ ಬರೆದೆ, ಇಂಥ ಅವಸ್ಥೆಯಲ್ಲಿ ಅವರ ನಿರ್ದೇಶವೇನು ಎಂಬುದನ್ನು ನಾನು ತಿಳಿಯಲು ಬಯಸಿದೆ. ಅದಕ್ಕೆ ಉತ್ತರವಾಗಿ ಮಹಾಪುರುಷ್ ಮಹಾರಾಜರು ನನಗೆ ಹೀಗೆ ಪತ್ರ ಬರೆದರು: ''ಇದೇ ಶ್ರೀಮಾತೆಯವರ ಇಚ್ಛೆಯೆಂದು ನೀನು ತಿಳಿಯಬೇಕು. ಈಗ ನೀನು ಮನೆಯಲ್ಲೇ ಇರು. ತಾಯಿತಂದೆಯರ ಸೇವೆ ಮಾಡು. ಒಳ್ಳೆಯ ಗೃಹಸ್ಥನಾಗು. ಉತ್ತಮ ಗೃಹಸ್ಥರ ಆವಶ್ಯಕತೆ ಕೂಡ ಇದೆ. ಇಲ್ಲದಿದ್ದರೆ ಠಾಕೂರರ ಪರಿವಾರ ಹೇಗೆ ಉಳಿಯುವುದು?'' ಮುಂದೆ ಶ್ರೀಮಾತೆಯವರನ್ನು ಭೇಟಿಯಾಗಲು ನನಗೆ ಸಾಧ್ಯವಾಗಲಿಲ್ಲ. ಆದರೆ ಆ ಅಸಾಧಾರಣವಾದ ದರ್ಶನದ ನೆನಪು ನನ್ನ ಜೀವನಕ್ಕೆ ಪ್ರಧಾನವಾದ ಶಕ್ತಿಯಾಗಿ ನಿಂತಿದೆ.[೨] ¤

---

೧ 'ಠಾಕೂರ್' ಎಂದು ಶ್ರೀಮಾತೆಯವರು ಶ್ರೀರಾಮಕೃಷ್ಣರನ್ನು ಕುರಿತೇ ಸಾಮಾನ್ಯವಾಗಿ ಹೇಳುತ್ತಿದ್ದರು; ಆದರೆ ಬಂಗಾಳಿಯಲ್ಲಿ ಠಾಕೂರ್ ಎಂದರೆ ವಿಶಾಲಾರ್ಥದಲ್ಲಿ 'ಪ್ರಭು', 'ಭಗವಂತ' ಎಂದರ್ಥ. *(–ಅನು)*

೨ ಈ ಸ್ಮೃತಿಲೇಖನವು ನಮಗೆ ದೊರಕಿದ್ದು ಲೇಖಕರ ಮಗಳು ವೀಣಾ ಚೌಧುರಿ ಅವರ ಮೂಲಕ. ಸ್ವಾಮಿ ಈಶಾನಾನಂದರ 'ಮಾತೃ ಸಾನ್ನಿಧ್ಯದಲ್ಲಿ' ಎಂಬ ಗ್ರಂಥದಲ್ಲೂ ಲೇಖಕರ ದೀಕ್ಷೆಯ ವಿವರಣೆಯಿದೆ. *(–ಸಂ)*